International Journal of Kannada Research 2019; 5(4): 19-21

International Journal of Kannada Research
www.kannadajournal.com

**ISSN: 2454–5813**
IJKR 2019; 5(4): 19-21
© 2019 IJKR
www.kannadajournal.com
Received: 16-08-2019
Accepted: 18-09-2019

**ಪ್ರೊ. ಮಂಜುನಾಥ ಎಂ.**
ಸಹಾಯಕ ಪ್ರಾಧ್ಯಾಪಕರು
ಜಿ.ಸಿ.ಕಾಲೇಜು ಅಂಕೋಲಾ

**Corresponding Author:**
**ಪ್ರೊ. ಮಂಜುನಾಥ ಎಂ. ಪಾಟೀಲ**
ಸಹಾಯಕ ಪ್ರಾಧ್ಯಾಪಕರು
ಜಿ.ಸಿ.ಕಾಲೇಜು ಅಂಕೋಲಾ

# ಕರ್ನಾಟಕ ಮತ್ತು ಪೋರ್ತುಗೀಸರು

**ಪ್ರೊ. ಮಂಜುನಾಥ ಎಂ.**

16 ಶತಮಾನದ ಅಂತ್ಯ ಭಾಗದಲ್ಲಿ ಮತ್ತು 17 ಶತಮಾನದ ಆದಿ ಭಾಗದಲ್ಲಿ ಕರ್ನಾಟಕದ ಕರಾವಳಿ ಬಂದರುಗಳು ಪೋರ್ತುಗೀಸರ ಮುಖ್ಯ ವ್ಯಾಪಾರ ಕೇಂದ್ರಗಳಾಗಿದ್ದವು. ಕಾರಣ ಕರಾವಳಿ ಬಂದರು ಅವರ ಪ್ರಮುಖ ವ್ಯಾಪಾರ ವಸಾಹತು ಗೋವಾಕ್ಕೆ ಬಹು ಸಮೀಪದಲ್ಲಿತ್ತು. ಮೊದಲಿಗೆ ಪೋರ್ತುಗೀಸರು ಕಾಳು ಮೆಣಸು ಗುಣ ಮಟ್ಟದಲ್ಲಿ ಉತ್ತಮವಾಗಿದ್ದು ಸುಲಭದಲ್ಲಿ ದೊರೆಯುತ್ತಿತ್ತು. ಅಲ್ಲದೇ ಗೋವಾದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಕೆನರಾದ ಅಕ್ಕಿಯೇ ಪೂರೈಕೆಯಾಗುತ್ತಿತ್ತು. ಹೀಗಾಗಿ 17 ಶತಮಾನದ ಪ್ರಾರಂಭದಲ್ಲಿ ಪೋರ್ತುಗೀಸರು ಕೆನರಾದೊಡನೆ ತಮ್ಮ ವ್ಯಾಪಾರವನ್ನು ಅಭಿವೃದ್ಧಿಪಡಿಸಿದರು.

ಭಾರತಕ್ಕೆ ಬರುವ ಮೊದಲ ಜಲಮಾರ್ಗ ಕಂಡುಹಿಡಿದ ಯುರೋಪಿಯನ್ನರೆಂದರೆ ಪೋರ್ತುಗೀಸರಾಗಿದ್ದಾರೆ. ಕ್ರಿ.ಶ 1948 ರಲ್ಲಿ ಪೋರ್ತುಗಲ್ ನಾವಿಕ ವಾಸ್ಕೋಡಿಗಾಮ ಭಾರತದ ಪಶ್ಚಿಮ ಕರಾವಳಿಯ ಕಲ್ಲಿಕೋಟೆಯನ್ನು ತಲುಪಿದನು. ಅಲ್ಲಿಯ ಹಿಂದೂ ಜಾಮೋರಿನ್ ಅರಸ ಪೋರ್ತುಗೀಸರಿಗೆ ಭಾರತದಲ್ಲಿ ವ್ಯಾಪಾರ ಮಾಡಲು ಅನುಮತಿ ನೀಡಿದನು. ಇದರಿಂದ ಪ್ರೇರೇಪಿತರಾದ ಇತರ ಯುರೋಪಿಯನ್ನರಾದ ಡಚ್ಚರು, ಫ್ರೆಂಚರು ಮತ್ತು ಆಂಗ್ಲರೂ ಕೂಡ ಭಾರತದಲ್ಲಿ ವಸಾಹತು ಸ್ಥಾಪಿಸಿ ಪೋರ್ತುಗೀಸರಿಗೆ ವ್ಯಾಪಾರ ಪೈಪೋಟಿ ನೀಡಲಾರಂಭಿಸಿದರು.

ವಾಸ್ಕೋಡಿಗಾಮನ ಕಾಲದಿಂದಲೇ ಕರ್ನಾಟಕ ಮತ್ತು ಪೋರ್ತುಗೀಸರ ನಡುವೆ ನಿಕಟ ಸಂಪರ್ಕ ಆರಂಭವಾಯಿತು.

ಕ್ರಿ.ಶ 1504 ರಲ್ಲಿ ಗಾಮನು ಎರಡನೆಯ ಬಾರಿ ಭಾರತಕ್ಕೆ ಬಂದಾಗ, ಕರ್ನಾಟಕದ ಗೇರುಸೊಪ್ಪೆಯ ಕರಾವಳಿಯ ಬಳಿ ತಿಮ್ಮೋಜ ಎಂಬ ನಾವಿಕನೊಡನೆ ಸೆಣಸಿದನೆಂದೂ, ಹಾಡುಹಳ್ಳಿ (ಭಟ್ಕಳ) ದೊರೆಯೊಡನೆ ಹೋರಾಡಿ, ಕೊನೆಗೆ ಅವನೊಡನೆ ಒಪ್ಪಂದ ಮಾಡಿಕೊಂಡನೆಂದೂ ತಿಳಿದು ಬರುತ್ತದೆ.**1** ಇದೇ ರೀತಿ ಕ್ರಿ.ಶ 1505 ರಲ್ಲಿ ಹೊನ್ನಾವರದ ಮೇಲೆ ದಾಳಿ ಮಾಡಿದ ಪೋರ್ತುಗೀಸರು ಆ ಬಂದರಿನಿಂದ ಕಪ್ಪ ಸಂಗ್ರಹಿಸಿದ್ದರು.**2** ಅದೇ ವರ್ಷ ಪೋರ್ತುಗೀಸ ವೈಸರಾಯ ಅಲ್ಮೇಡಾ ಕಾರವಾರ ಸಮೀಪದ ಅಂಜದೀವ ದ್ವೀಪವನ್ನು ವಶಪಡಿಸಿಕೊಂಡು ಕೋಟೆಯನ್ನು ಕಟ್ಟಿದನು ಎಂದು ತಿಳಿದು ಬರುತ್ತದೆ. ತುರ್ಕರ ವೈರಿಗಳಾದ ಪೋರ್ತುಗೀಸರೊಡನೆ ತಿಮ್ಮೋಜನು ಸ್ನೇಹವನ್ನು ಮಾಡಿಕೊಂಡನು. ತಿಮ್ಮೋಜನು ವಿಜಯನಗರದ ಸೇವೆಯಲ್ಲಿದ್ದ ಒಬ್ಬ ನಾವಿಕನಾಗಿದ್ದನು ಎಂಬುದು ರೆ.ಹೆರಾಸರ ಅಭಿಪ್ರಾಯವಾಗಿದೆ. ತಿಮ್ಮೋಜನ ಸಹಾಯದಿಂದಲೇ ನಂತರ ಆಗಮಿಸಿದ ಪೋರ್ತುಗೀಸ ವೈಸರಾಯ ಅಲ್ಬುಕರ್ಕ ಗೋವೆಯನ್ನು ವಿಜಾಪುರದ ಆದಿಲ್‌ಶಹನಿಂದ ವಶಪಡಿಸಿಕೊಂಡನು [3].

ಕೆನರಾದಲ್ಲಿ ಓನಾರ (ಹೊನ್ನಾವರ) ಕುಂದಾಪುರ (ಬಾರ್ಸೆಲೂರು) ಮತ್ತು ಮಂಗಳೂರು ಪೋರ್ತುಗೀಸರ ಮುಖ್ಯ ವ್ಯಾಪಾರಿ ನೆಲೆಗಳಾಗಿದ್ದವು. ಓನಾರ (ಹೊನ್ನಾವರ) ಪೋರ್ತುಗೀಸರ ಪ್ರಮುಖ ಕರಿಮೆಣಸು ರಫ್ತು ಕೇಂದ್ರವಾಗಿತ್ತು. ಇಲ್ಲಿಗೆ 35 ಮೈಲು ಸಮೀಪದ ಗುಡ್ಡ ಪ್ರದೇಶನ ಗೇರುಸೊಪ್ಪೆಯಲ್ಲಿ ಭಾರಿ ಪ್ರಮಾಣದಲ್ಲಿ ಕರಿಮೆಣಸು ಲಭ್ಯವಾಗುತ್ತಿತ್ತು. ಇಲ್ಲಿ ಪೋರ್ತುಗೀಸರು ಕರಿಮೆಣಸು 'ತೂಕ ಘಟಕ' ಸ್ಥಾಪಿಸಿದ್ದರು. ಅಲ್ಲಿಂದ ತೂಕ ಮಾಡಿದ ಕರಿಮೆಣಸನ್ನು ಹೊನ್ನಾವರಕ್ಕೆ ತಂದು ರಫ್ತು ಮಾಡುತ್ತಿದ್ದರು. ಇಟಲಿಯ ಪ್ರವಾಸಿ ಪೆಟ್ರಾಡೆಲ್ಲಾವೆಲ್ಲಿ ಬರೆಯುತ್ತಾನೆ ಗೇರಸೊಪ್ಪೆಯನ್ನು ಕುರಿತು ಬರೆಯುತ್ತಾನೆ–" ಈ ದೇಶದ ಅತಿ ಹೇರಳವಾಗಿ ಕಾಳುಮೆಣಸು ಬೆಳೆಯುವ ಪ್ರದೇಶ ಇದಾಗಿದೆ. ಆದ್ದರಿಂದಲೇ ಪೋರ್ತುಗೀಸರು ಇಲ್ಲಿನ ರಾಣಿ ಚೆನ್ನ ಭೈರಾದೇವಿಯನ್ನು "ಮೆಣಸಿನ ರಾಣಿ" (Rainha de Pimenta) ಎಂದು ಕರೆದರು [4].

ಪೋರ್ತುಗೀಸರು ಮತ್ತು ವಿಜಯನಗರದೊಡನೆ ಉತ್ತಮವಾದ ಸಂಬಂಧವಿತ್ತು. ಆದಿಲ್‌ಶಾಹಿಗಳನ್ನು ಪರಾಭವಗೊಳಿಸಿ ಗೋವೆಯನ್ನು ವಶಪಡಿಸಿಕೊಂಡ ಪೋರ್ತುಗೀಸರೊಂದಿಗೆ ಸ್ನೇಹ ಬೆಳೆಸಲು ವಿಜಯನಗರದ ದೊರೆ ಕೃಷ್ಣದೇವರಾಯನು ಉತ್ಸುಕನಾಗಿದ್ದನು. ಅದಲ್ಲದೇ ತುರ್ಕರಿಗೂ ಮತ್ತು ಪೋರ್ತುಗೀಸರಿಗೂ ಇರುವ ಪಾರಂಪರಿಕ ವೈರತ್ವದ ವಿಚಾರ ವಿಜಯನಗರಕ್ಕೆ ತಿಳಿದಿತ್ತು. ಅಲ್ಲದೇ ಅರಬ ವರ್ತಕರು ಪರ್ಶಿಯಾದಿಂದ ತರುತ್ತಿದ್ದ ಉತ್ತಮ ತಳಿಯ ಯುದ್ಧ ಕುದುರೆಗಳನ್ನು ಹೆಚ್ಚಾಗಿ ವಿಜಾಪುರದ ಮುಸ್ಲೀಂ ಸುಲ್ತಾನನಿಗೆ ಮಾರುತ್ತಿದ್ದರು. ಈ ಕೊರತೆಯನ್ನು ವಿಜಯನಗರ ಪೋರ್ತುಗೀಸರಿಂದ ತುಂಬಿಕೊಂಡಿತು. ವಿಜಯನಗರ ಪೋರ್ತುಗೀಸರ ಬಹುದೊಡ್ಡ ವ್ಯಾಪಾರ ಗಿರಾಕಿಯಾಗಿದ್ದು ಉತ್ತಮ ತಳಿಯ ಯುದ್ಧಾಶ್ವಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಕ್ರಿ.ಶ 1547 ರಲ್ಲಿ ಪೋರ್ತುಗೀಸರು ವಿಜಯನಗರ ಸಾಮ್ರಾಟರ ಜೊತೆಗೆ ಒಂದು ವ್ಯಾಪಾರ ಒಪ್ಪಂದವನ್ನು ಮಾಡಿಕೊಂಡರು. ಇದರಂತೆ ಗೋವೆಯಲ್ಲಿ ಬಂದಿಳಿದ ಎಲ್ಲಾ ಯುದ್ಧ ಕುದುರೆಗಳನ್ನು ಪೋರ್ತುಗೀಸರು ವಿಜಯನಗರಕ್ಕೇ ಮಾರಬೇಕು. ಇಲ್ಲಿನ ಸ್ಥಳೀಯ ವರ್ತಕರು ತಮ್ಮ ವಸ್ತುಗಳನ್ನು ಕುಂದಾಪುರ(ಬಾರ್ಸೆಲೂರ್) ಮತ್ತು ಹೊನ್ನಾವರ ಬಂದರುಗಳ ಮೂಲಕ ಪೋರ್ತುಗೀಸರಿಗೇ ಮಾರಬೇಕು ಎಂದು ಕರಾರಾಯಿತು.5 ಕನ್ನಡ ನಾಡಿನ ಕಾಡುತ್ಪತ್ತಿ (ಕರಿಮೆಣಸು,ಶುಂಟಿ,ಮಸಾಲೆ ಸಾಮಾನು),ಅಕ್ಕಿ,ಸಕ್ಕರೆ ಮತ್ತು ಕೊಬ್ಬರಿಗಳನ್ನು ವಿಶೇಷವಾಗಿ ಪೋರ್ತುಗೀಸರೇ ಕೊಳ್ಳುತ್ತಿದ್ದರು. ಯುರೋಪದಿಂದ ವಿಜಯನಗರಕ್ಕೆ ಬೇಕಾದ ಯುದ್ಧ ಸಾಮಗ್ರಿಗಳನ್ನು ಮತ್ತು ವಿಲಾಸೀಯ ವಸ್ತುಗಳನ್ನು ಪೋರ್ತುಗೀಸರೇ ಪೂರೈಸುತ್ತಿದ್ದರು. ಹೀಗಾಗಿ ವಿಜಯನಗರದ ವ್ಯಾಪಾರ ಸಂಪರ್ಕದಿಂದ ಪೋರ್ತುಗೀಸರ ಗೋವಾ ವಸಾಹತು ಶ್ರೀಮಂತ ನಗರವಾಗಿ ಬೆಳೆಯಿತು. ಆದರೆ ಕ್ರಿ.ಶ 1565 ತಾಳಿಕೋಟೆ ಯುದ್ಧದ ನಂತರ ವಿಜಯನಗರ ಸಾಮ್ರಾಜ್ಯದ ಪತನ ಪೋರ್ತುಗೀಸರ ವ್ಯಾಪಾರಕ್ಕೆ ಭಾರಿ ಧಕ್ಕೆ ತಗುಲಿತು.ಇದರ ಪರಿಣಾಮ ಗೋವೆ ನಗರ ಕೂಡ ಅನುಭವಿಸಿತು. "ಗೋವೆಯಲ್ಲಿ ನಿವಾಸಿಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಯಿತು. ಮತ್ತೊಮ್ಮೆ ಗೋವೆ ಚೇತರಿಸಿಕೊಳ್ಳಲಿಲ್ಲ [6]

ಪೋರ್ತುಗೀಸರು ನಂಬಿಕೆಗೆ ಅರ್ಹರಾಗಿರಲಿಲ್ಲ. ಅಲ್ಲದೇ ಜಗಳಗಂಟರಾಗಿದ್ದರು. ವಿಜಯನಗರದ ಸ್ನೇಹ ನೀತಿಯ ದುರುಪಯೋಗ ಪಡೆದು ಪಶ್ಚಿಮ ಕರಾವಳಿಯಲ್ಲಿ ತಾವೇ ವ್ಯಾಪಾರದ ಸರ್ವಾಧಿಕಾರಿಗಳಂತೆ ವರ್ತಿಸ ತೊಡಗಿದರು. ಕುಂದಾಪುರ,ಬಾರ್ಕೂರು,ಮಂಗಳೂರು,ಮಂಜೇಶ್ವರ,ಕುಂಬ್ಳೆ,ಮುಲ್ಕಿ, ಚಿತ್ತಾಕುಲ,ಅಂಕೋಲಾ,ಮಿರ್ಜಾನ, ಮತ್ತು ಹೊನ್ನಾವರ ಮುಂತಾದ ಕರಾವಳಿ ಬಂದರುಗಳಿಂದ ತಾವೇ ವಾರ್ಷಿಕ ಕಪ್ಪ ಸಂಗ್ರಹಿಸತೊಡಗಿದರು [7]. ಇಲ್ಲಿನ ವ್ಯಾಪಾರಿಗಳನ್ನು ಸದೆಬಡಿದು, ಪಟ್ಟಣಗಳನ್ನು ಸೂರೆಗೊಂಡು ಹಿಂಸಾಚಾರದ ಮೂಲಕ ಹಣ ಸಂಗ್ರಹಿಸತೊಡಗಿದರು. ಕ್ರಿ.ಶ 1515 ರಲ್ಲಿ ಮಂಗಳೂರು ನಗರವನ್ನು ಸುಟ್ಟ ಬಗ್ಗೆ ದಾಖಲೆಗಳಿಂದ ತಿಳಿದು ಬರುತ್ತದೆ. ಅದೇ ವರ್ಷ ಬಾರ್ಕೂರನ್ನು ಸೂರೆಗೊಂಡರು. ಕ್ರಿ.ಶ 1530 ರಲ್ಲಿ ಪುನಃ ಮಂಗಳೂರು ನಗರವನ್ನು ಸುಟ್ಟರು [8]. ಕ್ರಿ.ಶ 1515 ರಲ್ಲಿ ಭಟ್ಕಳವನ್ನು ಸುಟ್ಟು ನಾಶಮಾಡಿದ ಬಗ್ಗೆ ಹಾಡುವಳ್ಳಿಯ ಇತಿಹಾಸದಲ್ಲಿ ಉಲ್ಲೇಖವಿದೆ. ಈ ರೀತಿ ತಮ್ಮ ದುಂಡಾವರ್ತನೆಯ ಮೂಲಕ ಪೋರ್ತುಗೀಸರು ಎಂದರೆ ಜಗಳಗಂಟರು ಎಂಬ ಅರ್ಥ ಕರಾವಳಿಯಲ್ಲಿ ರೂಢಿಯಲ್ಲಿತ್ತು.

ಪಶ್ಚಿಮ ಕರಾವಳಿಯ ಮೇಲೆ ವಿಜಯನಗರದ ನಿಯಂತ್ರಣ ಸಡಿಲವಾದಾಗ ಪೋರ್ತುಗೀಸರ ದುಂಡಾವರ್ತನೆ ಕೂಡ ಅಧಿಕವಾಯಿತು. ಅವರು ಗೋವೆಯಲ್ಲದೆ ಕರ್ನಾಟಕ ಮತ್ತು ಕೇರಳ ಕರಾವಳಿಯಲ್ಲಿ ಕೂಡ ತಮ್ಮ ವ್ಯಾಪಾರ ವಿಸ್ತರಿಸಲು ಪ್ರಯತ್ನಿಸಿದರು. ಇದಕ್ಕೆ ಅವರಿಗೆ ತೀವ್ರ ಪ್ರತಿರೋಧ ತೋರಿದವಳು ತುಳು ನಾಡಿನ ಉಳ್ಳಾಳದ ರಾಣಿ ಅಬ್ಬಕ್ಕ. ಕ್ರಿ.ಶ 1555 ರಲ್ಲಿ ಪೋರ್ತುಗೀಸ ಅಡ್ಮಿರಲ್ ಡೋಮ್ ಅಲ್ವೆರೊ ಡಿಸಿಲ್ವ ದಾಳಿ ಮಾಡಿದಾಗ ಪೋರ್ತುಗಾಲ ಸೈನ್ಯವನ್ನು ಸಾಗರದ ಮಧ್ಯದಲ್ಲಿ ಸೋಲಿಸಿದಳು. ಈಕೆಯ ಪ್ರತಿರೋಧದ ನಡುವೆಯೂ ಕ್ರಿ.ಶ 1567 ರಲ್ಲಿ ಮಂಗಳೂರಿನ ಕೆಲ ಭಾಗಗಳನ್ನು ವಶಪಡಿಸಿಕೊಂಡು ' ಸೇಂಟ್ ಸೆಬೆಸ್ಟಾವು' ಎಂಬ ಕೋಟೆಯನ್ನು ಕಟ್ಟಿಕೊಂಡರು. ಕ್ರಿ.ಶ 1569 ರಲ್ಲಿ ಹೊನ್ನಾವರ (ಓನೋರ್)ವನ್ನು ಗೆದ್ದು ಅಲ್ಲೂ ಒಂದು ಕೋಟೆಯನ್ನು ಕಟ್ಟಿಕೊಂಡರು [9] ಅದೇ ವರ್ಷ ಕುಂದಾಪುರ(ಬಾರ್ಸೆಲೂರ್) ವಶಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲರಾದರೂ, ಮರುವರ್ಷ 1570 ರಲ್ಲಿ ಅದನ್ನು ಗೆದ್ದು ಹಳೆಯ ಕೋಟೆಯನ್ನು ದುರಸ್ತಿಪಡಿಸಿದರು. ಹೀಗೆ ಪಶ್ಚಿಮ ಕರಾವಳಿಯಲ್ಲಿ ಪೋರ್ತುಗೀಸರು ಸಾಕಷ್ಟು ಪ್ರಬಲರಾದರು.ಅವರ ಅನುಮತಿಯಿಲ್ಲದೇ ಯಾವ ನೌಕೆಯೂ ಅರಬ್ಬಿ ಸಮುದ್ರದಲ್ಲಿ ಓಡಾಡುವಂತಿರಲಿಲ್ಲ ಎಂದು ಡಚ್ ಪ್ರವಾಸಿ ಲಿನ್ಸಕೊತಿನ್ ಬರೆದಿದ್ದಾನೆ [10] ಕ್ರಿ.ಶ 1600 ತದನಂತರದಲ್ಲಿ ಭಾರತದಲ್ಲಿ ಪೋರ್ತುಗೀಸರ ಪ್ರಭಾವ ಕುಂದತೊಡಗಿತು. ಆಗ ಸಾಗರದ ಮೇಲೆ ಸಾಮ್ಯವನ್ನು ಪಡೆದ ಸ್ಪೇನ ಪೋರ್ತುಗಲ್‌ನ್ನು ವಶಪಡಿಸಿಕೊಂಡಿತು. ನಂತರ ತನ್ನ ನೌಕಾಬಲವನ್ನು ವೃದ್ಧಿಸಿದ ಇಂಗ್ಲೆಂಡ ಸ್ಪೇನವನ್ನು ಪರಾಭವಗೊಳಿಸಿತು. ಇದೇ ಕಾಲಕ್ಕೆ ಕರ್ನಾಟಕದಲ್ಲಿ ಕೆಳದಿಯ ನಾಯಕರು ಪ್ರಬಲರಾಗಿ ಪಶ್ಚಿಮ ಕರಾವಳಿಯ ಮೇಲೆ ತಮ್ಮ ಹಿಡಿತವನ್ನು ಬಲಗೊಳಿಸಿದರು. ಅಲ್ಲದೇ ಇತರ ಯುರೋಪಿಯನ್ನರಾದ ಇಂಗ್ಲೀಷರ,ಡಚ್ಚರ ಮತ್ತು ಫ್ರೆಂಚರ ವ್ಯಾಪಾರ ಪೈಪೋಟಿ ಹೆಚ್ಚಿ ಭಾರತದಲ್ಲಿ ಪೋರ್ತುಗೀಸರ ವ್ಯಾಪಾರ ಕ್ಷೀಣಿಸತೊಡಗಿತು. ಕ್ರಿ.ಶ 1618 ರಲ್ಲಿ ಕೆಳದಿಯ ವೆಂಕಟಪ್ಪ ನಾಯಕ ಪೋರ್ತುಗೀಸರ ಕೋಟೆಯನ್ನು ಹೊರತುಪಡಿಸಿ ಮಂಗಳೂರು ನಗರದ ಬಹುಭಾಗ ಗೆದ್ದುಕೊಂಡನು [11] ಪೋರ್ತುಗೀಸರಿಗೆ ಕೆಳದಿಯ ನಾಯಕನಿಂದಾದ ಭಾರಿ ಸೋಲನ್ನು ಆಂಗ್ಲ ದಾಖಲೆಗಳು ವರದಿ ಮಾಡಿವೆ [12] ಮುಂದೆ ನಿರಾಶರಾದ ಪೋರ್ತುಗೀಸರು ಪಶ್ಚಿಮ ಕರಾವಳಿಯ ಗಂಗೊಳ್ಳಿಯಲ್ಲಿ ಮಾತ್ರ ವ್ಯಾಪಾರ ಮಾಡಲು ಕೆಳದಿಯ ನಾಯಕರಿಂದ ಸಮ್ಮತಿ ಪಡೆದರು [13] ಕೆಳದಿಯ ಶ್ರೇಷ್ಠ ದೊರೆ ಶಿವಪ್ಪ ನಾಯಕ ಅಧಿಕಾರರೂಢನಾದ ನಂತರ ಕ್ರಿ.ಶ 1652 ರ ಹೊತ್ತಿಗೆ ಪೋರ್ತುಗೀಸರನ್ನು ಹಿಮ್ಮೆಟ್ಟಿಸಿ ಪಶ್ಚಿಮ ಕರಾವಳಿಯ ಮೇಲೆ ಸಂಪೂರ್ಣವಾಗಿ ತನ್ನ ನಿಯಂತ್ರಣ ಸ್ಥಾಪಿಸಿದನೆಂದು 'ಕೆಳದಿ ನೃಪ ವಿಜಯಂ' ಎಂಬ ಕೃತಿಯಿಂದ ತಿಳಿದು ಬರುತ್ತದೆ. ತನ್ಮೂಲಕ ಪೋರ್ತುಗೀಸರು ಮಂಗಳೂರಿನ ಮೇಲೆ ಕೂಡ ತಮ್ಮ ನೆಲೆಯನ್ನು ಕಳೆದುಕೊಂಡರೆಂದು ಡಾ. ಮೊರೇಸ್ ಅಭಿಪ್ರಾಯ ಪಟ್ಟಿದ್ದಾರೆ [14] ಆದಾಗ್ಯೂ ಸುಮಾರು 17 ನೆಯ ಶತಕದ ಕೊನೆಗೂ ಅವರು ಮಂಗಳೂರಿನ ಒಳನಾಡಿನ ಅಡ್ಯಾರ್‌ನಲ್ಲಿ (ಫರಂಗಿಪೇಟೆ) ವ್ಯಾಪಾರ ಮಳಿಗೆಯೊಂದನ್ನು ಹೊಂದಿದ್ದರು ಎಂಬುದನ್ನು ಶ್ರೀ ಗೋವಿಂದ ಪೈ ತಿಳಿಸುತ್ತಾರೆ. ಆದರೆ ಅವರ ರಾಜಕೀಯ ಪ್ರಭಾವ ಮಾತ್ರ ಕರ್ನಾಟಕದಲ್ಲಿ ಉಳಿಯಲಿಲ್ಲ.

ನಂತರದಲ್ಲಿ ಮೈಸೂರಿನಲ್ಲಿ ತನ್ನ ಸರ್ವಾಧಿಕಾರ ಸ್ಥಾಪಿಸಿದ ಹೈದರ ಅಲಿ ಆಂಗ್ಲರ ಕಡು ವೈರಿಯಾಗಿದ್ದನು. ತನ್ನ ಸೈನ್ಯಕ್ಕೆ ಯುರೋಪಿಯನ್ ಮಾದರಿಯಲ್ಲಿ ಯುದ್ಧ ಕೌಶಲ್ಯ ತರಬೇತಿ ನೀಡಲು ಆಂಗ್ಲ ವಿರೋಧಿ ಯುರೋಪಿಯನ್‌ರನ್ನು ನೇಮಿಸಿಕೊಂಡಿದ್ದನು. ಆಗ ಪಿಕ್ಲೊತೊ ಎಂಬ ಪೊರ್ತುಗೀಸ್ ಸಾಹಸಿಗ ತನ್ನ ಕೆಲವು ಪೊರ್ತುಗೀಸ್ ಸಹಚರರೊಂದಿಗೆ ಮೈಸೂರಿನ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದನು. ಇದರ ಹೊರತಾಗಿ

ಕರ್ನಾಟಕದಲ್ಲಿ ತದನಂತರ ಪೊರ್ತುಗೀಸ್‌ರ ಯಾವುದೇ ಪ್ರಭಾವ ಕಂಡು ಬರುತ್ತಿಲ್ಲ [15]

ಪೊರ್ತುಗೀಸ್‌ರ ಸಂಪರ್ಕ ಕರ್ನಾಟಕದಲ್ಲಿ ಕೆಲವು ಮಹತ್ವದ ಪರಿಣಾಮ ಬೀರಿವೆ. ಅವರು ಕರ್ನಾಟಕದಲ್ಲಿ ಕ್ರೈಸ್ತ ಧರ್ಮವನ್ನು ಜನಪ್ರಿಯಗೊಳಿಸಿದರು. ಪಶ್ಚಿಮ ಕರಾವಳಿಯಲ್ಲಿ ಕೋಟೆಗಳ ಜೊತೆ ಚರ್ಚುಗಳನ್ನು ನಿರ್ಮಿಸಿದರು. ಮತಾಂತರ ಕಾರ್ಯ ನಡೆಸಿದರು. ಕರಾವಳಿ ಜನತೆಗೆ ಸುಧಾರಿತ ವ್ಯವಸಾಯ ಮತ್ತು ಪಶು ಸಂಗೋಪನೆ ಕಲಿಸಿದರು. ವಿದೇಶಿ ಹಂದಿ ಮತ್ತು ಕುಕ್ಕುಟಗಳ ತಳಿಯನ್ನು ಪರಿಚಯಿಸಿದರು. ಭಾರತಕ್ಕೆ ಬಸಳೆ,ಪಪ್ಪಾಯ, ಅನಾನಸು, ಬಟಾಟೆ, ತಂಬಾಕು, ಗೋಡಂಬಿ ಮತ್ತು ಮುಸುಕಿನ ಜೋಳವನ್ನು ತಂದವರೇ ಪೋರ್ತುಗೀಸರು ಎಂದು ಹೇಳಲಾಗುತ್ತಿದೆ. ಪೊರ್ತುಗೀಸ್‌ರ ಸಾಬೂನು, ತಂಬಾಕು, ಮೇಜು, ಇಸ್ತ್ರಿ, ಕಾಡತೂಸು ಮತ್ತು ಲಿಲಾವು ಮುಂತಾದ ಶಬ್ದಗಳು ಕನ್ನಡ ಭಾಷೆಯಲ್ಲಿ ಬಳಕೆಯಲ್ಲಿವೆ. ಪೋರ್ತುಗೀಸರು ಯುರೋಪ ಮಾದರಿಯಲ್ಲಿ ಕಟ್ಟಿದ ಚರ್ಚುಗಳು, ಕೋಟೆಗಳು ಮತ್ತು ಕಟ್ಟಡಗಳು ಕರ್ನಾಟಕದ ವಾಸ್ತುಶಿಲ್ಪದ ಮೇಲೆ ಪ್ರಭಾವ ಬೀರಿದವು. ಕರ್ನಾಟಕದ ಇತಿಹಾಸವನ್ನು ರಚಿಸುವಲ್ಲಿ ಪೋರ್ತುಗೀಸರ ಕಾಗದ ಪತ್ರಗಳು, ಗ್ರಂಥಗಳು,ಪ್ರವಾಸಿ ಕಥನಗಳು ಅತ್ಯಮೂಲ್ಯ ಮೂಲಾಧಾರಗಳಾಗಿವೆ. ಅಲ್ಲದೆ ಕರ್ನಾಟಕದ ಗಡಿಯಲ್ಲಿದ್ದ ಪೋರ್ತುಗೀಸರ ಪ್ರಮುಖ ವಸಾಹತು ಗೋವಾ ಕರ್ನಾಟಕದ ಜನಜೀವನ ಸಂಸ್ಕೃತಿಗಳ ಮೇಲೆ ತನ್ನದೇ ಆದ ಪರಿಣಾಮಗಳನ್ನು ಬೀರಿದೆ [16].

## ಅಡಿ ಟಿಪ್ಪಣಿಗಳು

1. Correia.G. ‘Three Voyages of Gama,III,P. 309; Danvers CF ‘Portuguese in India, 81-82
2. Heras H , ‘AraviduDynasty, 213-14
3. Feria y Sousa ‘Asia Portuguese I’ P.304; Whiteway R.S ‘The rise of Portuguese power in India’
4. Travels of Petra De Velle ed.by Edward Grey for the Hakluyut Society 2, 221
5. Bombay Gazetteer, Kanara II, 115
6. Heras .H ‘AraviduDynasty, 240
7. Sturrock, South Kanara Gazetteer P.68-69 ; Bombay Gazetteer, Kanara II, P.114
8. Feria II P.109,118-19 & 191-92
9. Danvers, 547
10. Greenlee. Voyages of Linsehoten to East Indies II P.67
11. Feria III, 326
12. Foster W. The English Factories in India, 98-99
13. K.D.Swaminathan –Nayakas of Ikkeri, 76
14. ಲಿಂಗಣ್ಣ –“ಕೆಳದಿ ನೃಪ ವಿಜಯಂ”
15. ಕರ್ನಾಟಕ ಸಂಪುಟ ೫೫ ಲೇಖನ– ಪ್ರೊ.ಸೂರ್ಯನಾಥ ಕಾಮತ ಕ.182